# ತನಿಖೆಯ ಉತ್ಖನನದಲ್ಲಿ ದಿಟ್ಟ-ಮೋಹಕ ವ್ಯಕ್ತಿತ್ವದ ಅನಾವರಣ

‘ಮನೇಲಿ ಜಯಂತ್ ಒಬ್ಬರೇನಾ, ಹೇಗೆ?’

‘ಜಯಂತ್ ಅವರು ಸಮಾಜಶಾಸ್ತ್ರದಲ್ಲಿ ಎಂ.ಎ. ಮುಗಿಸಿ, ಕೆಲಸ ಹುಡುಕ್ತಿದ್ದಾಗ, ಕಾರ್ ಆಕ್ಸಿಡೆಂಟ್‌ನಲ್ಲಿ ಅವರ ತಂದೆ–ತಾಯಿ ಇಬ್ಬರೂ ತೀರಿಹೋಗಿ, ಅವರ ತಂದೆ ನಡೆಸ್ತಿದ್ದ ಫ್ಯಾಕ್ಟರಿಯ ಉಸ್ತುವಾರಿ, ಒಬ್ಬನೇ ಮಗನಾದ ಇವರ ಹೆಗಲ ಮೇಲೆ ಬಿತ್ತು. ಇವರಿಗೆ ಅದರಲ್ಲಿ ಅನುಭವವೂ ಇಲ್ಲ, ಆಸಕ್ತೀನೂ ಇಲ್ಲ. ಫ್ಯಾಕ್ಟರಿಯಲ್ಲಿ ಹೇಗೋ ಒಬ್ಬ ಒಳ್ಳೆ ನುರಿತ, ಅನುಭವಿ, ಫೋರ್‌ಮ್ಯಾನ್ ಇದ್ದಾರಂತೆ, ನಡೀತಾಯಿದೆ. ಸ್ವಂತ ಮನೆ ಇದೆ. ಸಾಕಷ್ಟು ಸ್ಥಿತಿವಂತರು.’

‘ಡೈರೆಕ್ಟರ್ ದಿನೇಶ್, ಟೀವಿ ಜೊತೆಗೆ ಫಿಲ್ಮ್‌ನಲ್ಲೂ ಇದ್ದಾರ?’

‘ಈಗೀಗ ಸಿನಿಮಾಗೆ ಸಂಭಾಷಣೆ, ಚಿತ್ರಕಥೆ ಬರೆಯೋದಕ್ಕೆ ಶುರು ಮಾಡಿದ್ದಾರೆ. ಅವರ ಇತ್ತೀಚಿನ ಸಿನಿಮಾಗೆ, ಅವರ ಸ್ನೇಹಿತನೇ ಡೈರೆಕ್ಟರ್. ಅಮ್ಮೂನ ಸೆಕೆಂಡ್ ಹೀರೋಯಿನ್ ರೋಲ್‌ಗೆ ಶಿಫಾರಸು ಮಾಡಿ, ಸೈನ್ ಮಾಡ್ಸಿದ್ರು ಸಾರ್’.

‘ಅವರಿಗೆ ಸಂಸಾರ, ಕುಟುಂಬ...’

‘ಅವರಿಗೆ ಮದುವೆ ಆಗಿ ಮೂರು ವರ್ಷದ ಒಂದು ಹೆಣ್ಣು ಮಗು ಕೂಡ ಇದೆಯಂತೆ. ಎಲ್ಲಾ ಊರಲ್ಲಿದ್ದಾರಂತೆ. ಇವರು ಅಲ್ಲಿಗೆ ಹೋಗೋದೇ ಇಲ್ಲ. ಅವರೂ ಇವರನ್ನ ಬಿಟ್ಟಾಕಿದ್ದಾರೆ. ಇಲ್ಲಿ ಇವರು ಬ್ಯಾಚುಲರ್ ತರ ನಡ್ಕೊಳ್ತಾರೆ ಅಂತ. ಒಟ್ನಲ್ಲಿ ಅವರ ನಡತೆ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ ಅನ್ಸುತ್ತೆ’.

‘ಅಮ್ಮು ಮತ್ತು ಅವರ ಮಲತಾಯಿಯ ಸಂಬಂಧ ಹೇಗೆ?’

‘ವಿಜಯಮ್ಮ ಅವರು ಅಡುಗೆ ಕೋಣೆ, ದೇವರ ಕೋಣೆ ಮತ್ತು ಅವರ ಮಕ್ಕಳ ಕೋಣೆಯ ತ್ರಿಕೋನದಾಚೆಗಿನ ಜಗತ್ತು ತಮಗೆ ಸಂಬಂಧಿಸಿದ್ದೇ ಅಲ್ಲ ಅನ್ನೋ ರೀತಿ ಜೀವನ ಮಾಡ್ತಾರೆ. ಕ್ಯಾಪ್ಟನ್ ತೀರ್ಕೊಂಡ್ ಮೇಲೆ ಸ್ವಲ್ಪ ಖಿನ್ನತೆಗೆ ಬಿದ್ರೇನೋ’.

‘ಅಮ್ಮು ಜೊತೆ ಹೇಗೆ?’

‘ಅಮ್ಮು ಮತ್ತು ವಿಜಯಮ್ಮ ತಾಯಿ–ಮಗಳ ರೀತಿಯಲ್ಲಿ ತೀರಾ ಭಾವನಾತ್ಮಕವಾಗಿ ಬೆಸಕೊಳ್ಳೋದಕ್ಕೆ ಆಗದಿದ್ರೂನು ಒಂದು ಮಟ್ಟದ ಹೊಂದಾಣಿಕೆಯ ಡೀಸೆಂಟ್ ರಿಲೇಶನ್ ಮೇಂಟೇನ್ ಮಾಡ್ತಿದ್ರು’.

‘ಆಯ್ತು ಸಿತಾರ ಅವ್ರೇ ಇನ್ನೂ ಏನಾದರೂ ಇದ್ದರೆ ಹೇಳಿ ಕಳುಸ್ತೀವಿ, ಆಗ ಬನ್ನಿ. ನಿಮ್ಮ ಸಹಕಾರ ತುಂಬಾ ಮುಖ್ಯ’.

ಅಷ್ಟರಲ್ಲಿ ಭುಜಂಗನ ಫೋನ್ ಬಂದಿತ್ತು.

